CC No.1014/2025
CW-1   PW-1

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ.  1014/2025**

**ಹೆಸರು** :- **ಶಿವಪ್ರಸಾದ ಸಿ**

**ತಂದೆಯ ಹೆಸರು** :- **ಎ. ಡಿ. ಚಂದ್ರಪ್ಪ**

**ವಯಸ್ಸು** :- **50 ವರ್ಷ**

**ಉದ್ಯೋಗ** :- **ಅಬಕಾರಿ ಉಪ ಅಧೀಕ್ಷಕರು**

**ಸ್ಥಳ** :- **ಧಾರವಾಡ ಉಪ ವಿಭಾಗ**

**ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿನಾಂಕಃ 05.05.2022 ರಿಂದ 05.02.2025 ರವರೆಗೆ ಅಬಕಾರಿ ಉಪ ಅಧೀಕ್ಷಕರಾಗಿ ಸಾಗರ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15.11.2024 ರಂದು ಮಧ್ಯಾಹ್ನ 1.45 ರ ಸಮಯದಲ್ಲಿ ನಾನು ಚಾಸಾ-2 ರಿಂದ 4 ರವರೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ ಮುಟಗುಪ್ಪೆ ಗ್ರಾಮದ ಬಳಿ ಗಸ್ತು ನಿರ್ವಹಿಸುತ್ತಿದ್ದಾಗ ನನಗೆ ದೂರವಾಣಿ ಕರೆಯೊಂದು ಬಂದಿದ್ದು, ಮುಟಗುಪ್ಪೆ ಗ್ರಾಮದ ಆರೋಪಿಯು ತನ್ನ ವಾಸದ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿ, ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು, ಬಂದ ಮಾಹಿತಿಯನ್ನು ಚಾಸಾ-2 ರಿಂದ 4 ರವರಿಗೆ ತಿಳಿಸಿ, ಪಂಚರನ್ನು ಕರೆತರುವಂತೆ ಸೂಚಿಸಿರುತ್ತೇನೆ ಮತ್ತು ಸದರಿ ಮುಟಗುಪ್ಪೆ

ಗ್ರಾಮದ ಗ್ರಾಮಸ್ಥರನ್ನು ಆರೋಪಿಯ ವಿಳಾಸದ ಬಗ್ಗೆ ವಿಚಾರಿಸಿರುತ್ತೇನೆ. ಸದರಿ ಗ್ರಾಮಸ್ಥರು ಆರೋಪಿಯ ವಿಳಾಸವನ್ನು ತಿಳಿಸಿದ್ದು ಆದರೆ ಪಂಚರಾಗಿ ಬರಲು ನಿರಾಕರಿಸಿರುತ್ತಾರೆ. ನಂತರ ಮಾಹಿತಿ ಇದ್ದ ಮನೆಯ ಮುಂದೆ ನಮ್ಮ ವಾಹನವನ್ನು ನಿಲ್ಲಿಸಿದಾಗ ಮನೆಯ ಮುಂದೆ ಇದ್ದ ಒಬ್ಬ ಮಹಿಳೆ ಮನೆಯ ಹಿಂಬಾಗಿಲಿನಿಂದ ಓಡಿಹೋಗಿರುತ್ತಾಳೆ. ಚಾಸಾ−2 ರಿಂದ 4 ರವರು ಆಕೆಯನ್ನು ಹಿಡಿಯಲು ಪ್ರಯತ್ನಿಸಿದ್ದು, ಸಿಕ್ಕಿರುವುದಿಲ್ಲ. ನಂತರ ಮನೆಯ ಮುಂಭಾಗಕ್ಕೆ ಬಂದು ಒಬ್ಬ ವ್ಯಕ್ತಿ ನಿಂತಿದ್ದನ್ನು ನೋಡಿ ಆತನನ್ನು ಪರಿಚಯಿಸಿಕೊಂಡು ಸದರಿ ಮನೆಯು ಯಾರಿಗೆ ಸೇರಿದ್ದು ಎಂದು ಕೇಳಲಾಗಿ ಸದರಿ ಮನೆಯು ಆರೋಪಿಗೆ ಸೇರಿದ್ದು ಎಂದು ತಿಳಿಸಿರುತ್ತಾನೆ. ನಮಗೆ ಬಂದ ಮಾಹಿತಿಗೂ ಸದರಿ ವ್ಯಕ್ತಿ ಹೇಳಿದ ಮಾಹಿತಿಗೂ ತಾಳೆಯಾಗಿದ್ದು, ಸದರಿ ವ್ಯಕ್ತಿಯನ್ನು ಪಂಚರಾಗುವಂತೆ ಕೋರಿಕೊಂಡಿದ್ದು, ಆತನು ಒಪ್ಪಿರುವುದಿಲ್ಲ. ಚಾಸಾ−2 ಮತ್ತು 3 ರವರನ್ನು ಪಂಚರಾಗುವಂತೆ ಕೇಳಿದ್ದು, ಅವರು ಒಪ್ಪಿಕೊಂಡಿರುತ್ತಾರೆ. ನಂತರ ಮಾಹಿತಿ ಇದ್ದ ಮನೆಯನ್ನು ಶೋಧನೆ ಮಾಡುವ ಉದ್ದೇಶದಿಂದ ನ್ಯಾಯಾಲಯದಿಂದ ಶೋಧನಾ ಸಮುಚ್ಚಿತ್ತ ಆಧಾರವನ್ನು ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದೆ ಇರುವುದರಿಂದ ಹಾಗೂ ಸಾಕ್ಷ್ಯ ನಾಶವಾಗುವ ಸಂಭವ ಇರುವುದರಿಂದ ನಾನು ಸ್ಥಳದಲ್ಲಿಯೇ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 54 ಅಡಿಯಲ್ಲಿ ಶೋಧನಾ ಸಮುಚ್ಚಿತ್ತ ಆಧಾರವನ್ನು ತಯಾರಿಸಿಕೊಂಡು ಸಾಕ್ಷಿದಾರರ ಸಹಿಯನ್ನು ಪಡೆದಿರುತ್ತೇನೆ. ನಂತರ ಮನೆಯನ್ನು ಪ್ರವೇಶ ಮಾಡಲಾಗಿ ಅಡುಗೆ ಕೋಣೆಯ ಉತ್ತರ ದಿಕ್ಕಿನ ಮೂಲೆಯಲ್ಲಿ ಒಂದು ಬಿಳಿ

ಬಣ್ಣದ ಪ್ಲಾಸ್ಟಿಕ್ ಚೀಲ ಕಂಡುಬಂದಿದ್ದು, ಅದನ್ನು ತೆರೆದು ನೋಡಲಾಗಿ ಅದರಲ್ಲಿ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇದು, ಅದರಲ್ಲಿ 90 ಎಮ್.ಎಲ್ 70 ಟೆಟ್ರಾ ಪ್ಯಾಕೇಟ್ ಗಳು ಕಂಡುಬಂದಿರುತ್ತವೆ. ಅವುಗಳನ್ನು ಸಂಗ್ರಹಿಸಿರುವುದು ಅಬಕಾರಿ ಕಾಯ್ದೆಗೆ ವಿರುದ್ಧವಾಗಿದ್ದು, ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸುವ ಉದ್ದೇಶದಿಂದ ಮನೆಯನ್ನು ಶೋಧಿಸಲಾಗಿ, ಮನೆಯ ಕಿಟಕಿಯಲ್ಲಿ ಆಧಾರ ಕಾರ್ಡ್ ದೊರೆತಿದ್ದು, ಅದನ್ನು ಪರಿಶೀಲಿಸಿದಾಗ ಅದರಲ್ಲಿರುವ ಮಾಹಿತಿಯು ಆರೋಪಿಗೆ ಸಂಬಂಧಿಸಿದ್ದು, ನಂತರ ದೊರೆತ ಎಲ್ಲಾ ಮುದ್ದೆ ಮಾಲುಗಳನ್ನು ಇಲಾಖಾ ಪರ ಅಮಾನತ್ತುಪಡಿಸಿಕೊಂಡು, ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು, ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ, ಅರಗಿನಿಂದ ಇಲಾಖಾ ಮೊಹರು ಹಾಕಲಾಯಿತು. ಸದರಿ ಇಲಾಖಾ ಮಾದರಿ ಮೊಹರನ್ನು ತಯಾರಿಸಿ ಹಾಗೂ ಮಾದರಿ ಚೀಟಿಗಳನ್ನು ತಯಾರಿಸಿ ಅಂಟಿಸಲಾಯಿತು. ಸಾಕ್ಷಿಯು ಶೋಧನಾ ಸಮುಚ್ಚಿತ ಆಧಾರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸಾಕ್ಷಿ ಘಟನಾ ಸ್ಥಳದಲ್ಲಿ ತಯಾರಿಸಿದ ಸ್ವತ್ತುಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಮೊಹರಿನ ಚೀಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3ಎ ಎಂದು ಗುರುತಿಸಲಾಯಿತು. ಮದ್ಯಾಹ್ನ 1.45 ರಿಂದ 2.45 ರವರೆಗೆ ಪಂಚನಾಮೆಯನ್ನು

ಜರುಗಿಸಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಹಿಂದುರುಗಿ ಸ್ವ ಪಿರ್ಯಾದಿಯನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ಸ್ವ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ನಂತರ ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸುವ ಉದ್ದೇಶದಿಂದ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರವನ್ನು ಮತ್ತು ಅದರೊಂದಿಗೆ ಹಾಜರುಪಡಿಸಿದ ಪೆನ್ ಡ್ರೈವ್ ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-7, 8 ಎಂದು ಗುರುತಿಸಲಾಯಿತು. ಸಾಕ್ಷಿಯು ಭಾ.ಸಾ.ಅಧಿನಿಯಮ ಕಲಂ 63(4)(ಸಿ) ಅಡಿಯಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು. ನಂತರ ಘಟನಾ ಸ್ಥಳದಲ್ಲಿ ದೊರೆತ ಆರೋಪಿಯ ಆಧಾರ್ ಕಾರ್ಡ್ ನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಕಡತ ಮತ್ತು ಮುದ್ದೆ ಮಾಲನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಎಂ. ವಕೀಲರಿಂದಃ**

ಆ ದಿನ ನಾವು ಉಳವಿ ಮತ್ತು ಇನ್ನಿತರ ಹಳ್ಳಿಗಳಿಂದ ಗಸ್ತು ನಿರ್ವಹಿಸುತ್ತಾ ಬಂದಿರುತ್ತೇವೆ. ಮುಟಗುಪ್ಪೆ ಗ್ರಾಮದಲ್ಲಿ ಈವರೆಗೂ ಬಸ್ ವ್ಯವಸ್ಥೆ ಮತ್ತು ಬಸ್ ನಿಲ್ದಾಣ ಇರುವುದಿಲ್ಲ ಅಂದರೆ ಸರಿಯಲ್ಲ. ಮುಟಗುಪ್ಪೆ ಗ್ರಾಮವು ಸುಮಾರು 2000 ಕ್ಕಿಂತ ಹೆಚ್ಚಿನ ಜನವಸತಿ ಗ್ರಾಮ ಅಂದರೆ ಇರಬಹುದು. ಆ ದಿನ ನಾವು ನಿಂತುಕೊಂಡಿರುವ ಸ್ಥಳದಿಂದ ಆರೋಪಿಯ ಮನೆ ಎಷ್ಟು ದೂರ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾವು ನಿಂತುಕೊಂಡಿರುವ ಸ್ಥಳದಿಂದ ಆರೋಪಿತನ ಮನೆಯವರೆಗೂ ನಮ್ಮ ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ಮಾಹಿತಿ ಬರುವ ಮುಂಚೆ ಆರೋಪಿಯ ಮನೆ ಗೊತ್ತಿರುವುದಿಲ್ಲ. ಆ ದಿನ ನಾವು ಮಾಹಿತಿ ನೀಡಿದ ವ್ಯಕ್ತಿಯನ್ನು ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ. ಆ ದಿನ ಗ್ರಾಮಸ್ಥರು ಆರೋಪಿಯ ಮನೆಯನ್ನು ತೋರಿಸಿರುತ್ತಾರೆ. ಆರೋಪಿತನ ಮನೆಯು ನಾಲ್ಕು ರಸ್ತೆಗಳು ಕೂಡುವ ಸರ್ಕಲ್ ನಲ್ಲಿ ಇದೆ ಅಂದರೆ ನನಗೆ ನೆನಪಿಲ್ಲ. ನಾವು ಗ್ರಾಮಕ್ಕೆ ಹೋದಾಗ ಆರೋಪಿಯ ಮನೆ ವಿಳಾಸ ಕೇಳಿದಾಗ ಎಷ್ಟು ಜನ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಿನ ಮುಟಗುಪ್ಪೆ ಗ್ರಾಮದಲ್ಲಿ ಯಾವುದೇ ವ್ಯಕ್ತಿಯನ್ನು ಮಾತನಾಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿಯ ಮನೆ ಯಾವ ತರ ಇದೆ ಎಂದು ಮಹಜರ್ ನಲ್ಲಿ ಬರೆದಿರವುದಿಲ್ಲ ಅಂದರೆ ಸರಿಯಲ್ಲ. ಸದರಿ ಮನೆಯ ವಿಸ್ತೀರ್ಣ ಮತ್ತು ದಿಕ್ಕುಗಳನ್ನು ನಮೂದಿಸಿಲ್ಲ ಅಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿದ್ದ ಸ್ಥಳದ ಗೋಡೆಯ ಚಕ್ಕುಬಂದಿಯನ್ನು

ಪಂಚನಾಮೆಯಲ್ಲಿ ನಮೂದಿಸಿಲ್ಲ ಅಂದರೆ ಸರಿ. ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸುವ ಉದ್ದೇಶದಿಂದ ಸ್ಥಳದಲ್ಲಿದ್ದ ಮಹಿಳೆ ಓಡಿಹೋಗಿರುತ್ತಾಳೆ ಅಂದರೆ ಸರಿಯಲ್ಲ. ಆ ದಿನ ಸದರಿ ಮನೆಯಲ್ಲಿ ಮೂಲ ಆಧಾರ್ ಕಾರ್ಡ್ ನಮಗೆ ದೊರೆತಿರುತ್ತದೆ. ವಶಪಡಿಸಿಕೊಂಡಿದ್ದ ಎಲ್ಲಾ ಮುದ್ದೆ ಮಾಲುಗಳನ್ನು ನಮ್ಮ ಇಲಾಖೆಗೆ ತರಬೇಕಾಗುತ್ತದೆ ಅಂದರೆ ಸರಿ. ಆರೋಪಿತನ ಮೂಲ ಆಧಾರ್ ಕಾರ್ಡ್‌ನ್ನು ಛಾಯಚಿತ್ರ ತೆಗೆದುಕೊಂಡು ಅದನ್ನು ಅಲ್ಲಿಯೇ ಇಟ್ಟಿರುತ್ತೇವೆ. ಆ ದಿನ ಆರೋಪಿಯನ್ನು ನಮ್ಮ ಇಲಾಖೆಯವರು ನೋಡಿರುವುದಿಲ್ಲ ಅಂದರೆ ಸರಿ. ನಾನು ಹೇಳುವಂತ ಸ್ಥಳದಲ್ಲಿ ಆರೋಪಿ ವಾಸವಾಗಿಲ್ಲ ಅಂದರೆ ಸರಿಯಲ್ಲ. ಇಲಾಖೆ ಅಂಕಿ ಸಂಖೆಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಮಹಜರ್ ನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(**ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು**).

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**